# <u>"ಸುಲಭವಲ್ಲವೊ ಮಹಾನಂದ"</u> ಮುಂಡಿಗೆಯ ವ್ಯಾಖ್ಯಾನ

1. **Ref.**: Dasara Maatina Sobagu, by Dr. Vijayendra R Desai, page No. 112
2. **Ref.**: Dasa Ratna – Chaturtha Varshada PaThya Pustaka by Sourabha Dasa Sahitya Vidyalaya, Koppala, page No. 25.

ಪುರಂದರ ದಾಸರು ತಮ್ಮ ಸಾಹಿತ್ಯದಲ್ಲಿ ಅನೇಕಾನೇಕ ಪ್ರಾಣಿಗಳ ಗುಣವರ್ಣನೆಯನ್ನು ಮನುಷ್ಯನ ಸ್ವಭಾವಕ್ಕೆ ಸರಿಯಾಗಿ ಹೊಂದುವಂತೆ ಪ್ರಾಣಿ ರೂಪಕಗಳಲ್ಲಿ ಸಂಕೇತಿಸಿದ್ದಾರೆ. ಮಾನವನಿಗಿರಬೇಕಾದ ಸಾಮಾಜಿಕ ಪ್ರಜ್ಞೆಯನ್ನು, ಆಧ್ಯಾತ್ಮಿಕ ಚಿಂತನೆಯನ್ನು ತಮ್ಮ ಕೃತಿಗಳಲ್ಲಿ ಪ್ರಾಣಿತನಗಳ ಉಪಮೇಯಗಳಿಂದ ಸಂಭವನೀಯ ಸತ್ಯಗಳನ್ನು ಬಡಿದೆಬ್ಬಿಸಿದ್ದಾರೆ.

ದಾಸರು ತಮ್ಮ ಮುಂಡಿಗೆಗಳಲ್ಲಿ ಕಗ್ಗಂಟಿನ ಪ್ರಮೇಯಗಳನ್ನು ಎಥೇಚ್ಛವಾಗಿ ಬಳಸಿ ಪರಮಾತ್ಮನ ಮಹಾತ್ಮೆಯನ್ನು ಮನಮುಟ್ಟುವಂತೆ ಅರ್ಥಗರ್ಭಿತವಾಗಿ ತಿಳಿಸುತ್ತಾರೆ. ಈ ಮುಂಡಿಗೆಯಲ್ಲಿಯೂ ಹಾಗೆಯೇ ಹೇಳಿದ್ದಾರೆ.

**ಮಹದಾನಂದ** ಎಂದರೆ ಮೋಕ್ಷದಲ್ಲಿ ಸಿಗುವ ಆನಂದ, ಸ್ವರೂಪಾನಂದ. ಆತ್ಮನಲ್ಲಿ ಅಂತರಾತ್ಮನಿದ್ದಾನೆ. ನಾವು ಹೊರಗೆ ಹುಡುಕುವ ದೇವರು ನಮ್ಮೊಳಗೇ ಇದ್ದಾನೆ. ಆತ ಬಿಂಬ, ನಾವು ಪ್ರತಿಬಿಂಬ. ಅಪರೋಕ್ಷ ಜ್ಞಾನ ಸಿಗುವ ತನಕ ಬಿಂಬನ ಉಪಾಸನೆ ಮಾಡಬೇಕು. ಇದೇ **ತನ್ನೊಳಗೆ ತಾನೇ ತಿಳಿಯುವ ಮಹದಾನಂದ**. ಇವುಗಳೆಲ್ಲವೂ ಸಿಗಬೇಕೆಂದರೆ ಒಳ್ಳೆಯ ಗುರುವಿನ ಮಾರ್ಗದರ್ಶನ ಬೇಕೇಬೇಕು. **ಗುರುವಿನ ದಯದಿಂದ** ಅಜ್ಞಾನವೆಂಬ ಕತ್ತಲೆಯನ್ನು ದೂರಮಾಡಿ ಜ್ಞಾನದ ಬೆಳಕಿನಲ್ಲಿ ಓಡಾಡಬೇಕು. ಇಲ್ಲಿ ಗುರುವಿನ ಮಹತ್ವವನ್ನು ಪುರಂದರ ದಾಸರು "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ, ಪರಿ ಪರಿ ಶಾಸ್ತ್ರವನೋದಿದರೇನು, ವ್ಯರ್ಥವಾಯಿತು ಭಕುತಿ .... " ಎಂಬ ಹಾಡಿನ ಮೂಲಕ ಚೆನ್ನಾಗಿ ವಿವರಿಸಿದ್ದಾರೆ.

ಹೀಗೆಯೇ ಪುರಂದರ ದಾಸರು ಈ ಕೆಳಗಿನ ನುಡಿಗಳಲ್ಲಿ, ಅರ್ಥಗರ್ಭಿತವಾಗಿ, ಸರಿಯಾದ ಉಪಮೇಯಗಳೊಂದಿಗೆ ಮುಕ್ತಿ ಮಾರ್ಗದ ದಾರಿಯನ್ನು ಸ್ಪಷ್ಟವಾಗಿ ತೋರಿಸಿದ್ದಾರೆ.

**ಬೆಕ್ಕನ್ನು ಇಲಿ ನುಂಗುವ ತನಕ:**

ಬೆಕ್ಕು ಇಲಿಯನ್ನು ನುಂಗುವುದು, ತಿನ್ನುವುದು ಸಹಜ. ಆದರೆ ಇಲ್ಲಿ ದಾಸರು ಇಲಿ ಬೆಕ್ಕನ್ನು ನುಂಗುವುದೆಂದು ಹೇಳಿದ್ದಾರೆ. ಇಲ್ಲಿ ಬೆಕ್ಕು ಎಂದರೆ ನಮ್ಮ ಹತ್ತು ಇಂದ್ರಿಯಗಳ ಸಮೂಹವೇ ದೊಡ್ಡ ಬೆಕ್ಕು. ಇಂತಹ ಬೆಕ್ಕು ನಮ್ಮ

ದೇಹದಲ್ಲಿದ್ದುಕೊಂಡು ನಮ್ಮನ್ನು ಮಹದಾನಂದದಿಂದ ದೂರ ತಳ್ಳುತ್ತದೆ. (ಪಂಚ ಜ್ಞಾನೇಂದ್ರಿಯಗಳು: ಚಕ್ಷು, ಶ್ರೋತ್ರ, ನಾಸಿಕ, ವದನ, ಚರ್ಮ); (ಪಂಚ ಕರ್ಮೇಂದ್ರಿಯಗಳು: ವಾಕ್, ಪಾಣಿ, ಪಾದ, ಪಾಯು, ಉಪಸ್ಥ). ನಮ್ಮ ಸೂಕ್ಷ್ಮ ಮನಸ್ಸನ್ನೇ ಇಲಿ ಎಂದಿದ್ದಾರೆ. ಮನದ ಹಿಡಿತದಲ್ಲಿ ಎಲ್ಲಾ ಇಂದ್ರಿಯಗಳಿರಬೇಕು. ಬೆಕ್ಕು ಬಲಿಷ್ಠವಾಗಿದ್ದರೆ ಇಂದ್ರಿಯಗಳು, ನಾನಾ ತರಹದ ಆಸೆ-ಆಮಿಷಗಳಿಗೆ ಬಲಿಯಾಗುತ್ತದೆ. ದೇವರ ಮೇಲೆ ಒಲವು ಮೂಡಬೇಕೆಂದರೆ ಇಂದ್ರಿಯಗಳು ನಮ್ಮ ಮನಸ್ಸಿನ ನಿಗ್ರಹದಲ್ಲಿರಬೇಕು. ಇಲ್ಲಿ ದಾಸರು ಇಂತಹ ಬೆಕ್ಕನ್ನು ಇಲಿ ನುಂಗುವ ತನಕ ಎಂದಿದ್ದಾರೆ. ಮನುಷ್ಯನು ಜ್ಞಾನ ಮಾರ್ಗದಲ್ಲಿ ಮುಂದುವರೆದು ಅಜ್ಞಾನದ ಕತ್ತಲೆಯನ್ನು ದೂರಮಾಡಿ ಮೋಕ್ಷದೆಡೆ ಸಾಗಬೇಕೆಂಬುದಾಗಿ ದಾಸರು ಹೇಳುತ್ತಾರೆ.

**ರಕ್ಕಸಿಯನು ಕಂಡು ಗಿಣಿ ನುಂಗುವ ತನಕ, ಮಕ್ಕಳ ಭಕ್ಷಿಸುವ ತನಕ:**

ಇದರ ಅರ್ಥ ವಿವರಣೆ ತುಂಬಾ ಸ್ವಾರಸ್ಯವಾಗಿದೆ. ಇಲ್ಲಿ ಅಜ್ಞಾನವೇ ರಕ್ಕಸಿ. ಅಜ್ಞಾನವು ನಮ್ಮನ್ನು ಆವರಿಸಿ ಮಹದಾನಂದದ ದಾರಿಯನ್ನು ಮುಚ್ಚಿ ಹಾಕಿದೆ. ರಕ್ಕಸಿಯ ರೂಪಗಳು ಅನೇಕ - ನಾನು ನನ್ನದು ಎನ್ನುವ ಸುಳ್ಳು ಅಭಿಮಾನ, ನಾನು ಸ್ವತಂತ್ರ ಎಂದುಕೊಂಡಿರುವುದು, ನಾನೇ ಎಲ್ಲವನ್ನು ಮಾಡುವುದು, ಪಡೆಯುವುದೆನ್ನುವ ದುರಹಂಕಾರ, ಇತ್ಯಾದಿ. ಇನ್ನು ರಕ್ಕಸಿಯ ಮಕ್ಕಳು ಎಂದರೆ ಪಂಚ ಅವಿದ್ಯೆಗಳು - ತಮ(ಅಜ್ಞಾನ), ಮೋಹ(ಭ್ರಮ), ಮಹಾ ಮೋಹ (ದ್ರೋಹ), ತಮಸ್ರ (ನಿಂದಾ) ಮತ್ತು ಅಂಧ ತಾಮಸ್ರ(ತಿರಸ್ಕಾರ). ಇಂತಹ ರಕ್ಕಸಿಯನ್ನು, ರಕ್ಕಸಿಯ ಮಕ್ಕಳನ್ನು ಗಿಣಿ ಎಂದರೆ ಜ್ಞಾನವು ನುಂಗಬೇಕು ಅಂದರೆ ಜ್ಞಾನದಿಂದ ಅಜ್ಞಾನವನ್ನು ಹೋಗಲಾಡಿಸಬೇಕು. ಜ್ಞಾನ ಬೆಳಕು; ಅಜ್ಞಾನ ಕತ್ತಲು. ಶ್ರೀಕೃಷ್ಣನ ಕೃಪೆಯಿಲ್ಲದೆ ಒಂದು ಹುಲ್ಲು ಕಡ್ಡಿಯು ಅಲುಗಾಡುವುದಿಲ್ಲ. ಎಲ್ಲವೂ ಅವನಿಚ್ಛೆಯಂತೆ. ಅವನು ಬಿಂಬ ನಾವು ಪ್ರತಿಬಿಂಬ. ಜ್ಞಾನ ದೀಪವನ್ನು ಬೆಳಗುತ್ತಾ ಪರಮಾನಂದದ ದಾರಿಯಲ್ಲಿ ಸಾಗುತ್ತಿರಬೇಕು.

ಇಲ್ಲಿ ಬಿಂಬ - ಪ್ರತಿಬಿಂಬಗಳನ್ನು ಉದಾಹರಣೆಗಳೊಂದಿಗೆ ಹೇಳಬಹುದು. ಮೊದಲೆಯದಾಗಿ ಎಲ್ಲರು ತಿಳಿದಿರುವಂತೆ ಕನ್ನಡಿಯಲ್ಲಿಯ ನಮ್ಮ ಪ್ರತಿಬಿಂಬ. ಅದು ಸ್ವತಂತ್ರವಲ್ಲ. ಹಾಗೆಯೇ ಇನ್ನೊಂದು ಉದಾಹರಣೆ. ಸಕಲ ಜೀವಿಗಳ, ವಸ್ತುಗಳ ನೆರಳು. ನೆರಳು ಬೀಳಲು ಬೆಳಕು ಬೇಕು. ನೆರಳು ಯಾವಾಗಲೂ ಕಪ್ಪು. ಕತ್ತಲೆಯು ಅಜ್ಞಾನದ ಸಂಕೇತ. ಬೆಳಕು ಜ್ಞಾನದ ಸಂಕೇತ. ಬೆಳಕಿಗೆ ಮೂಲ ಸೂರ್ಯ. ಸೂರ್ಯನ ಹಿಂದೆ ಆ ಪರಮಾತ್ಮ. ಪರಮಾತ್ಮನೇ ಬಿಂಬ. ಇಲ್ಲಿ ನೆರಳು ಪ್ರತಿಬಿಂಬ. ನೆರಳಿಗೆ ಸ್ವಾತಂತ್ರ್ಯವಿಲ್ಲ, ಸ್ವಂತಿಕೆಯಿಲ್ಲ. ಬೆಳಕಿದ್ದರೆ ನೆರಳು. ವಿಜ್ಞಾನದಲ್ಲಿಯೂ ಇದು ಸತ್ಯ. ಆಧ್ಯಾತ್ಮಿಕದಲ್ಲಿಯೂ ಇದು ಸತ್ಯ. ಬೆಳಕಿಲ್ಲದೆ ನೆರಳಿಲ್ಲ. ಬಿಂಬವಿಲ್ಲದೆ ಪ್ರತಿಬಿಂಬವಿಲ್ಲ. ಇದನ್ನು ಯಾರೂ, ಯಾವ ರೀತಿಯಲ್ಲೂ ಅಲ್ಲಗೆಳೆಯಲಾಗುವುದಿಲ್ಲ.

**ಮದ ಸೊಕ್ಕಿದ ಗಜವನು ನರಿ ನುಂಗುವ ತನಕ:**

ಮದವೇರಿದ ಆನೆಯೆಂದರೆ ಅಷ್ಟ ಮದಗಳನ್ನು {೧) ಅನ್ನ ಮದ, ೨) ಅರ್ಥ ಮದ, ೩) ಪ್ರಾಯ ಮದ, ೪) ವಿದ್ಯಾ ಮದ, ೫) ಕುಲ ಮದ, ೬) ಕರ್ಮ ಮದ, ೭) ಅಧಿಕಾರ ಮದ ಮತ್ತು ೮) ರೂಪ ಮದ} ತುಂಬಿಸಿಕೊಂಡಿರುವ ಮೂಢ ಮನುಷ್ಯ. ಒಬ್ಬ ಮನುಷ್ಯ ಹಾಳಾಗಲು ಅಷ್ಟ ಮದಗಳು ಕಾರಣ ಎಂದು ಹಿರಿಯರು ಹೇಳುತ್ತಾರೆ. ಇವು ಅಧಃ ಪತನಕ್ಕೆ ನೇರ ದಾರಿ. ಇನ್ನು ನರಿಯ ಸಂಕೇತ – ಯೋಗ, ಉಪಾಯ, ವಿವೇಕ ಮತ್ತು ವೈರಾಗ್ಯ. ವೈರಾಗ್ಯವೆಂದರೆ ನಾವು ಯಾವುದರಿಂದ ನಾಶವಾಗುವುದಿಲ್ಲವೊ ಅಂತಹ ವೈರಾಗ್ಯ, ಚಾಣಾಕ್ಷತನ. ಇಂತಹ ನರಿಯು ದುಷ್ಟ ಬುದ್ದಿಯ, ಮದವೇರಿದ ಆನೆಯನ್ನು ನುಂಗಬೇಕು. ಎಂದರೆ ಈ ಎಲ್ಲಾ ಕೆಟ್ಟ ಗುಣಗಳನ್ನು ಸುಟ್ಟುಹಾಕಿ ಪ್ರಗತಿಯ ಮಾರ್ಗವನ್ನು ಅನುಸರಿಸಬೇಕೆಂಬುವುದು ದಾಸರ ಹೇಳಿಕೆ ಮತ್ತು ಹಿತನುಡಿ.

ಇಂದ್ರಿಯಗಳು ಇಚ್ಚಿಸಿದಂತೆ ಮನ ನಡೆಯುವುದಲ್ಲ. ಮನದ ಮಾತಿಗೆ ಇಂದ್ರಿಯಗಳು ಮಣಿಯಬೇಕು. ಮನೋ ನಿಗ್ರಹ ಬೇಕು. ನಾನು ನನ್ನದು ಎನ್ನುವುದು ಬುದ್ದಿಯ ಬಲದಿಂದ, ಮನಸ್ಸಿನ ಧೃಡ ನಿರ್ಧಾರದಿಂದ ನಾಶವಾಗಬೇಕು. ಇದು ಸಾಧನೆಯ ಮಾರ್ಗ. ಇದೆಲ್ಲವನ್ನು ಸಾಧಿಸಲು ಒಳ್ಳೆಯ ಗುರುವಿನ ಮಾರ್ಗದರ್ಶನ ಬೇಕು. ಹರಿವಾಯುಗುರುಗಳ ಅನುಗ್ರಹ ಬೇಕು.

**ಇಬ್ಬರೊಡನೆ ಕೂಡುವ ತನಕ:**

ಇಬ್ಬರು ಎಂದರೆ ಗುರು ಮತ್ತು ಪರಮಾತ್ಮ. ಗುರುಗಳ ಮಾರ್ಗದರ್ಶನದಲ್ಲಿ ಮುಕ್ತಿ ಮಾರ್ಗದಲ್ಲಿ ಮುಂದೆ ಸಾಗಿ ಶ್ರೀಹರಿಯನ್ನು ಸೇರುವುದು. ಗುರುವಿನಿಂದಲೇ ಬಿಂಬ-ಪ್ರತಿಬಿಂಬಗಳು ಅಂದರೆ ಪರಮಾತ್ಮ-ಜೀವಾತ್ಮರು ಹೃದಯ ಕಮಲದಲ್ಲಿ ಕಾಣಬೇಕು. ಹರಿವಾಯುಗುರುಗಳಲ್ಲಿ ಶರಣಾಗತಿ ಹೊಂದಬೇಕು.

**ಮೂರು ಹಬ್ಬಿದ ಬೆಟ್ಟವ ನೊಣ ನುಂಗುವ ತನಕ:**

ಮೂರು ಹಬ್ಬಿದ ಬೆಟ್ಟಗಳು ಎಂದರೆ ಈ ಜನ್ಮದಲ್ಲಿ ಮತ್ತು ಜನ್ಮ-ಜನ್ಮಾಂತರದಲ್ಲಿ ನಾವು ಮಾಡಿದ ಪಾಪದ ರಾಶಿಗಳು - ಸಂಚಿತ ಕರ್ಮಗಳು, ಪ್ರಾರಬ್ದ ಕರ್ಮಗಳು ಮತ್ತು ಆಗಮಿ ಕರ್ಮಗಳು. ನಮ್ಮಲ್ಲಿರುವ ಸತ್ವ, ತಮಸ್ಸು ಮತ್ತು ರಜಸ್ಸು ಗುಣಗಳಿಂದ ಉಂಟಾದ ಜನ್ಮ ಜನ್ಮಗಳಿಂದ ಹಬ್ಬಿದ ಮೂರು ದೊಡ್ಡ ಬೆಟ್ಟಗಳು. ಈ ಮೂರು ಕರ್ಮರಾಶಿಗಳು ಸವೆಯುವವರೆಗೂ ಮುಕ್ತಿ ದೊರಕದು. ಇವುಗಳನ್ನು ನಾಶಮಾಡಲು ಹರಿವಾಯುಗುರುಗಳ ಅನುಗ್ರಹ ಬೇಕು. ಮಾರ್ಗದರ್ಶನ ಬೇಕು. ಮೂರು ಬೃಹದಾಕಾರದ ಬೆಟ್ಟಗಳನ್ನು ಒಂದು ಚಿಕ್ಕ ನೊಣ ನುಂಗ ಬೇಕು. ಎಲ್ಲಾ ಕರ್ಮಗಳು

ಸಂಪೂರ್ಣವಾಗಿ ಸವೆಯ ಬೇಕು. ನಾಶವಾಗ ಬೇಕು. ಇದನ್ನು ನೊಣ ನುಂಗುವ ತನಕ ಮುಕ್ತಿ ದೊರಕದೆಂದು ದಾಸರು ಅದ್ಭುತವಾಗಿ ಹೇಳಿದ್ದಾರೆ. ನೊಣದ ಇನ್ನೊಂದು ರೀತಿಯೆಂದರೆ ಅದು ಹಾರಾಡುತ್ತಾ ಎಲ್ಲವನ್ನು ತಿನ್ನಲು ಹೋಗುತ್ತದೆ. ಅದು ಶುಚಿಯಾದ ಆಹಾರವಾಗಲಿ, ಅಶುಚಿಯಾಗಿರಲಿ, ತಿಪ್ಪೆಯಾಗಿರಲಿ, ಕೊಳಕಾಗಿರಲಿ, ದುರ್ವಾಸನೆಯಿರಲಿ, ಸುವಾಸನೆಯಿರಲಿ, ಎಲ್ಲದರ ಮೇಲೆಯೂ ಕುಳಿತು ತನ್ನ ಆಹಾರವನ್ನು ತಿನ್ನುತ್ತದೆ. ಇಂತಹ ನೊಣವನ್ನು ಇಲ್ಲಿ ದಾಸರು ಸರಿಹೊಂದುವ ರೀತಿಯಲ್ಲಿ ಉಪಮೇಯದೊಂದಿಗೆ ಹೇಳಿದ್ದಾರೆ. ಅತಿ ಚಿಕ್ಕ ಚಿಕ್ಕ ತುಂಡುಗಳನ್ನು ಮಾಡಿ ಸ್ವಲ್ಪ ಸ್ವಲ್ಪವನ್ನೇ ಅದು ತಿನ್ನುತ್ತದೆ. ಅಂದರೆ ಪಾಪದ ರಾಶಿಗಳನ್ನು ಒಳ್ಳೆಯ ಗುರುಗಳ ಮಾರ್ಗದರ್ಶನದಿಂದ, ಭಕ್ತಿ ಮಾರ್ಗದಲ್ಲಿ ನಿರಂತರವಾಗಿ ಸಾಗಿ, ಸಾಧನೆ ಗೈಯುತ್ತಾ, ಕಷ್ಟಗಳನ್ನು ಎದುರಿಸುತ್ತಾ, ಭವಸಾಗರವನ್ನು ದಾಟುತ್ತಾ, ಕ್ಷಣ ಕ್ಷಣಕ್ಕೂ ಹರಿಯನ್ನು ನೆನೆಯುತ್ತಾ, ಸಾತ್ವಿಕ ಜೀವನ ನಡೆಸುತ್ತಾ, ಜ್ಞಾನಾರ್ಜನೆಯನ್ನು ಮಾಡುತ್ತಾ, ಜ್ಞಾನದ ಬೆಳಕಿನಲ್ಲಿ ಓಡಾಡುತ್ತಾ ಹರಿಪಾದವನ್ನು ಸೇರಬೇಕು, ಮುಕ್ತಿ ಹೊಂದಬೇಕು.

**ಒಬ್ಬರೊಡನೆ ಸೇರುವ ತನಕ:**

ಆ ಒಬ್ಬರು ಯಾರೆಂದರೆ ಭಕ್ತಿ. ಭಕ್ತಿಯ ಸಂಗ ಮಾಡಬೇಕು. ನವವಿಧ ಭಕ್ತಿಯಲ್ಲಿ ಪರಮಾತ್ಮನ ಸೇರುವ, ಕಾಣುವ ಮುಕ್ತಿ ಮಾರ್ಗವಿದೆ. ಜ್ಞಾನಾರ್ಜನೆಯಲ್ಲಿ ಭಕ್ತಿ. ಅದು ನಿರಂತರ. ಇದರಿಂದ ದುರಿತ ರಾಶಿಗಳೆಲ್ಲವೂ ಸಂಪೂರ್ಣ ನಾಶ ಹೊಂದುತ್ತವೆ.

**ಕೆಟ್ಟ ಗುಬ್ಬಿಯ ರಾಜಹಂಸವು ನುಂಗುವ ತನಕ:**

ಇಲ್ಲಿ ಗುಬ್ಬಿ ಜೀವರ ಪ್ರತೀಕ. ಹುಟ್ಟು-ಸಾವುಗಳ ಸಂಸಾರ ಬಂಧನ; ಹಳೆ ದೇಹ ಬಿಡುವುದು ಹೊಸ ದೇಹ ಪಡೆಯುವುದು. ಇಂತಹ ಭವ ಸಾಗರದಲ್ಲಿ ಸಿಲುಕಿದ ಜೀವರು ತೊಳಲಾಡುತ್ತಿದ್ದಾರೆ. ಪರಮಾತ್ಮನಿಂದ ದೂರವಾಗಿದ್ದಾರೆ.

ಮುಕ್ತಿ ಯೋಗ್ಯ ಜೀವರು ಸ್ವರೂಪತಃ ಸಾತ್ವಿಕರು, ಶುದ್ಧರು. ಇದೇ ಶುದ್ಧ ವರ್ಣದ ರಾಜಹಂಸ. ಈ ಹಂಸಕ್ಕೆ ಅನಾದಿ ಅಜ್ಞಾನದ ಲಿಂಗದೇಹ ಸುತ್ತಿದೆ. ಆದ್ದರಿಂದ ತನ್ನ ಸ್ವರೂಪ ತಿಳಿಯದೆ ರಾಜಹಂಸ ಕೆಟ್ಟ ಗುಬ್ಬಿಯಾಗಿದೆ. ಇಂತಹ ಕೆಟ್ಟ ಗುಬ್ಬಿಗೆ, ದೋಷ ಪೂರಿತ ಜೀವರಿಗೆ ಗುರುದಯೆ ಆಗಬೇಕು. ಸುಜ್ಞಾನ ಪಡೆಯಬೇಕು. ಭಕ್ತಿ ಮಾರ್ಗದಲ್ಲಿ ಸಾಗಬೇಕು. ಅಜ್ಞಾನ ನಾಶವಾಗಬೇಕು. ಪರಮಾತ್ಮನ ಅಪರೋಕ್ಷ, ಬಿಂಬ ದರ್ಶನವಾಗಬೇಕು. ಎಲ್ಲಾ ಕರ್ಮಗಳು ಸವೆಯಬೇಕು. ವಿರಜಾ ಸ್ನಾನ, ನಂತರ ಲಿಂಗದೇಹ ಕಳಚಬೇಕು. ಆಗ ಮುಕ್ತಿ ಪ್ರಾಪ್ತಿ. ಗುಬ್ಬಿಗೆ ತನ್ನ ಶುದ್ಧ

ಸ್ವರೂಪಾನಂದದ ಆವಿರ್ಭಾವ. ಇದನ್ನೇ “ಕೆಟ್ಟ ಗುಬ್ಬಿಯ ರಾಜಹಂಸವು ನುಂಗುವ ತನಕ” ವೆಂದು ದಾಸರು ಹೇಳಿದ್ದಾರೆ.

**ಒಳಹೊರಗೊಂದಾಗುವ ತನಕ:**

ಹೊರಗೆ ಪೂಜಿಸುವ ದೇವರನ್ನು ತನ್ನ ಒಳಗೇ, ಅಂದರೆ ಅಂತರಂಗದಲ್ಲಿ ಕಾಣಬೇಕು. ಹೊರಗಿನ ಅಜ್ಞಾನದ ಸ್ಥೂಲದೇಹ ಹೋಗಬೇಕು. ಒಳಗಿನ ಸ್ವರೂಪ ದೇಹ ವ್ಯಕ್ತವಾಗಬೇಕು. ಇದನ್ನೇ "ಒಳಹೊರಗೊಂದಾಗುವ ತನಕ" ಎಂದಿದ್ದಾರೆ ದಾಸರು. ಹೀಗೆ ಆಗುವುದು ಯಾವಾಗವೆಂದು ಮುಂದಿನ ಸಾಲಿನಲ್ಲಿ ಹೇಳಿದ್ದಾರೆ.

**ತಿಳಿದೆನೆಂಬ ಭಾವ ಬಯಲಾದಾಗ:**

ಎಲ್ಲಾ ಬಲ್ಲೆ ಎಂದರೆ ಏನೂ ತಿಳಿದಿಲ್ಲವೆಂದರ್ಥ. ಅದು ನಾನು, ನನ್ನದು ಎಂಬ ಅಹಂಕಾರ, ಅಜ್ಞಾನದ ಪ್ರತೀಕ. ಇದನ್ನೇ ಕನಕದಾಸರು ಹೇಳಿದ್ದು - "ನಾನು ಹೋದರೆ ಹೋದೆನು" ಎಂದು. ಇಂತಹ ಗುಣಗಳೆಲ್ಲ ಜ್ಞಾನಾರ್ಜನೆಯಿಂದ ಹೋಗಬೇಕು. ನಾಶವಾಗಬೇಕು. ವೆಂಕಟ ವಿಠ್ಠಲ ದಾಸರು ಹೇಳಿದಂತೆ "ನಂದೇನದೋ ಸ್ವಾಮಿ ನಿಂದೇ ಇದೆಲ್ಲವೂ" ಎನ್ನುವುದು ಅನುಭವಕ್ಕೆ ಬರಬೇಕು.

**ಬೆಳಕಿನೊಳಗೆ ಕಾಣುವ ತನಕ, ನಮ್ಮ ಚೆಲುವ ಪುರಂದರ ವಿಠ್ಠಲನ ದಯವಾಗುವ ತನಕ:**

ಸುಜ್ಞಾನದ ಬೆಳಕಿನಿಂದ ಅಜ್ಞಾನದ ಕತ್ತಲೆ ನಾಶವಾಗಬೇಕು. ನಾನು ಅಜ್ಞ, ಅವನು ಸರ್ವಜ್ಞ, ನಾನು ಪರತಂತ್ರ ಅವನು ಸ್ವತಂತ್ರ, ಅವನು ಬಿಂಬ ನಾನು ಪ್ರತಿಬಿಂಬ. ಅವನು ಪುರುಷೋತ್ತಮನೆಂದು ಜ್ಞಾನೋದಯವಾಗಬೇಕು. ಇವೆಲ್ಲವಕ್ಕೂ ಪರಮಾತ್ಮನ ಅನುಗ್ರಹ, ಗುರುಗಳ ದಯೆ ಬೇಕು. ಮುಖ್ಯಪ್ರಾಣ ದೇವರ ಕಾರುಣ್ಯ ಬೇಕು. ಒಟ್ಟಿನಲ್ಲಿ ಹರಿ-ವಾಯು-ಗುರುಗಳ ದಯವಿರಬೇಕು. ಇದನ್ನೇ ದಾಸರು ತಮ್ಮ ಆರಾಧ್ಯ ದೈವರಾದ ಪುರಂದರ ವಿಠ್ಠಲನ ದಯೆ ಎಂದು ವರ್ಣಿಸಿದ್ದಾರೆ.

ಈ ಮುಂಡಿಗೆಯಲ್ಲಿ ಪರಮಾತ್ಮನನ್ನು ಕಾಣುವ ಮುಕ್ತಿ ಮಾರ್ಗವನ್ನು ಪುರಂದರ ದಾಸರು ಅರ್ಥವತ್ತಾಗಿ ತೋರಿಸಿದ್ದಾರೆ. ಪರಿಪಕ್ವವಾದ ಜ್ಞಾನ-ಭಕ್ತಿಗಳಿಂದ, ಗುರುವಿನ ದಯದಿಂದ ಪರಮಾತ್ಮನ ಸಾಮೀಪ್ಯವನ್ನು ಹೊಂದಬೇಕೆಂದು ಮನಮುಟ್ಟುವಂತೆ ಹೇಳಿದ್ದಾರೆ. ಅದುವೇ ಮುಕ್ತಿ ಪಥ. ಅದುವೇ ಮಹದಾನಂದ.

ಡಾ. ಅನಂತ ರಾವ್ ದಂಡಿನ

ಭಾರತೀ ರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಕೃಷ್ಣಾರ್ಪಣಮಸ್ತು

ನಾಹಂ ಕರ್ತಾ ಹರಿ ಕರ್ತಾ